ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಶೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎಂ.ಮಂಜುನಾಥಗುಪ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

10ನೇ ಮಹಡಿಯಿಂದ ಎಸೆದ ಮಗು ಜೀವ ಉಳಿಸಿದ ವ್ಯಕ್ತಿ

ಲಂಡನ್‌ನ ವಸತಿ ಸಮುಚ್ಚಯದಲ್ಲಿ ಸಂಭವಿಸಿದ ಭೀಕರ ಅಗ್ನಿ ಅವಘಡದ ವೇಳೆ 10ನೇ ಮಹಡಿಯ ಕಿಟಕಿಯಿಂದ ಎಸೆದ ಮಗುವನ್ನು ಕೆಳಗಿದ್ದ ವ್ಯಕ್ತಿಯೊಬ್ಬರು ಹಿಡಿದು ಪ್ರಾಣ ಉಳಿಸಿದ್ದಾರೆ. ಲಂಡನ್ನಿನ ನಾರ್ಥ್ ಕೆನ್ಸಿಂಗ್ಟನ್‌ನಲ್ಲಿರುವ ಲಾಟಿಮ್ರ್ ರಸ್ತೆಯ ಲ್ಯಾಂಕೆಸ್ಟರ್ ವೆಸ್ಟ್ ಎಸ್ಟೇಟ್‌ನ ಅಪಾರ್ಟ್‌ಮೆಂಟ್‌ನಲ್ಲಿ ನಿನ್ನೆತಡರಾತ್ರಿ ಅಗ್ನಿ ಕಾಣಿಸಿಕೊಂಡಿದ್ದು, 10 ಮಂದಿ ಸಜೀವ ದಹನವಾಗಿದ್ದಾರೆ.

'ಯುದ್ಧ ಬೇಕೆನ್ನುವವರನ್ನು ಗಡಿಗೆ ಕಳಿಸಬೇಕು'

ಬಾಲಿವುಡ್ ನಟ ಸಲ್ಮಾನ್ ಖಾನ್ ಯುದ್ಧದ ಬಗ್ಗೆ ಮಾತನಾಡಿದ್ದು, ಯುದ್ಧ ನಕಾರಾತ್ಮಕ ಭಾವನೆಯಿಂದ ಕೂಡಿದೆ ಎಂದು ಹೇಳಿದ್ದಾರೆ. ತಮ್ಮ ಅಭಿನಯದ, ಬಿಡುಗಡೆಗೆ ಸಿದ್ಧವಾಗಿರುವ ಟ್ಯೂಬ್‌ಲೈಟ್ ಸಿನಿಮಾ ಯುದ್ಧಕ್ಕೆ ಸಂಬಂಧಿಸಿದ ಕಥೆ ಹೊಂದಿರುವ ಸಿನಿಮಾ ಆಗಿದೆ. ವಿವಾದಗಳು, ಸಮಸ್ಯೆಗಳನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬಹುದು. ಯುದ್ಧ ಬೇಕೆನ್ನುವವರು ಗಡಿಗೆ ತೆರಳಲಿ ಎಂದು ಸಲ್ಮಾನ್ ಹೇಳಿದ್ದಾರೆ.

ಯುವರಾಜ್ 300ನೇ ಏಕದಿನ ಪಂದ್ಯಕ್ಕೆ ಸಜ್ಜು

ಟೀಂ ಇಂಡಿಯಾದ ಸ್ಫೋಟಕ ಬ್ಯಾಟ್ಸ್‌ಮನ್ ಯುವರಾಜ್ ಸಿಂಗ್ 300ನೇ ಏಕದಿನ ಪಂದ್ಯ ಆಡಲಿದ್ದಾರೆ. ಚಾಂಪಿಯನ್ಸ್ ಟ್ರೋಫಿಯ ಬಾಂಗ್ಲಾ ದೇಶ ವಿರುದ್ಧದ ಪಂದ್ಯ ಇದಾಗಿದ್ದು, ಯುವರಾಜ್ ಸಿಂಗ್ 300ನೇ ಪಂದ್ಯ ಎಂಬ ವಿಷಯವಾಗಿ ಈ ಪಂದ್ಯ ಭಾರೀ ಮಹತ್ವ ಪಡೆದುಕೊಂಡಿದೆ. 35 ವರ್ಷದ ಯುವಿ 300ನೇ ಪಂದ್ಯ ಆಡುವ ಮೂಲಕ ವಿಶ್ವದ 19ನೇ ಹಾಗೂ ಭಾರತದ 5ನೇ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :218 ಗುರುವಾರ ಜೂ.15, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ನಗರಸಭೆ ಕಛೇರಿ ನಾಳೆ ಸ್ಥಳಾಂತರ

ಮತ್ತೆ ವಸ್ತುಪ್ರದರ್ಶನ ಆವರಣದಲ್ಲಿನ ಕಟ್ಟಡಕ್ಕೇ ಶಿಫ್ಟ್

ಹಾಸನ: ನಗರದ ಎನ್.ಆರ್.ಸರ್ಕಲ್ ನಲ್ಲಿರುವ ನಗರಸಭೆ ಕಛೇರಿಯು ನಾಳೆ ಬಿ.ಎಂ.ರಸ್ತೆಯಲ್ಲಿನ ಜಾತ್ರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಕಟ್ಟಡಕ್ಕೆ ಸ್ಥಳಾಂತರಗೊಳ್ಳಲಿದೆ.

ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಿದ್ಧತೆ ಕಾರ್ಯ ನಡೆದಿದೆ. ಶುಕ್ರವಾರ ಬೆಳಿಗ್ಗೆಯಿಂದಲೇ ಈ ಕಾರ್ಯ ಆರಂಭಗೊಳ್ಳಲಿದೆ. ಸೋಮವಾರದಿಂದ ಜಾತ್ರಾ ವಸ್ತು ಪ್ರದರ್ಶನದ ಆವರಣದಲ್ಲಿರುವ ಕಟ್ಟಡದಲ್ಲಿಯೇ ಕೆಲಸ ನಿರ್ವಹಿಸಲಾಗುವುದು ಎಂದು ನಗರಸಭೆ ಮೂಲಗಳು ಪತ್ರಿಕೆಗೆ ತಿಳಿಸಿವೆ.

ಈ ನಡುವೆ ಜಾತ್ರಾ ವಸ್ತು ಪ್ರದರ್ಶನದ ಆವರಣದಲ್ಲಿರುವ ಕಟ್ಟಡದಲ್ಲಿ ಕಛೇರಿ ಕಾರ್ಯಾರಂಭಿಸಿದರೂ ಇನ್ನು ಮೂರು ನಾಲ್ಕು ತಿಂಗಳಲ್ಲಿ ನೂತನ ಕಟ್ಟಡದ ಕಾಮಗಾರಿ ಆರಂಭಗೊಳ್ಳಲಿದೆ. ಇದಕ್ಕಾಗಿ ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ಎರಡೂವರೆ ಕೋಟಿ ರೂ. ಹಣವನ್ನು ಕಾಯ್ದಿರಿಸಲಾಗಿದೆ. ಇನ್ನುಳಿದಂತೆ ಎರಡೂವರೆ ಕೋಟಿ ರೂ. ಗಳನ್ನು ರಾಜ್ಯ ಸರ್ಕಾರ ಭರಿಸಲಿದೆ.

ಇದಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಅಂದಾಜು ಯೋಜನಾ ವೆಚ್ಚ ವರದಿ ಕೂಡ ಸಿದ್ಧಗೊಂಡಿದೆ. ಯೋಜನೆಗೆ ತಾಂತ್ರಿಕ ಅನುಮೋದನೆಯೂ ದೊರೆತಿದೆ. ಇನ್ನು 3 ತಿಂಗಳ ನಂತರ ಹೊಸ ಕಟ್ಟಡ ಕಾಮಗಾರಿ ಆರಂಭಗೊಳ್ಳಲಿದೆ. (-4ನೇ ಪುಟಕ್ಕೆ)

4 ಕೋಟಿ ರೂ. ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ

ಎನ್.ಆರ್.ಸರ್ಕಲ್‌ನಲ್ಲಿರುವ ಹಳೇ ಮುನಿಸಿಪಲ್ ಹೈಸ್ಕೂಲ್ ಕಟ್ಟಡವನ್ನು ತೆರವುಗೊಳಿಸಿ ಶೀಘ್ರ 4 ಕೋಟಿ ರೂ. ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ ಇಲ್ಲಿ ನಿರ್ಮಾಣವಾಗಲಿದೆ.

ಸದ್ಯ ನಗರಸಭೆ ಕಛೇರಿ ಇಲ್ಲಿಯೇ ಇದ್ದು, ಮುಂದಿನ ವಾರ ಕಟ್ಟಡವನ್ನು ಒಡೆಯಲಾಗುವುದು. ಇದಕ್ಕಾಗಿ ಎಲ್ಲಾ ಸಿದ್ಧತೆಯೂ ನಡೆದಿದೆ.

ಇದಕ್ಕೆ ತಾಂತ್ರಿಕ ಅನುಮೋದನೆ ದೊರೆತಿದೆ. ಡಿ.ಸಿ. ಕೂಡ ಇದಕ್ಕೆ ಹಸಿರು ನಿಶಾನೆ ತೋರಿದ್ದಾರೆ. ಶೀಘ್ರವೇ ವಾಣಿಜ್ಯ ಸಂಕೀರ್ಣ ನಿರ್ಮಾಣವಾಗಲಿದೆ ಎಂದು ನಗರಸಭೆ ಮೂಲಗಳು 'ಜನತಾಮಾಧ್ಯಮ'ಕ್ಕೆ ತಿಳಿಸಿವೆ.

ಬಸೆಟ್ಟಿ ಕೊಪ್ಪಲು ರಸ್ತೆ 50 ಅಡಿಗೆ ವಿಸ್ತರಣೆ

ಬಸೆಟ್ಟಿ ಕೊಪ್ಪಲು ರಸ್ತೆ ಎಷ್ಟು ಅಡಿಗೆ ವಿಸ್ತರಣೆಯಾಗುತ್ತದೆ? ಎಲ್ಲಿಂದ ಎಲ್ಲಿಗೆ ಎಂಬಿತ್ಯಾದಿ ಪ್ರಶ್ನೆಗಳು ಕೇಳಿ ಬರುತ್ತಲೇ ಇವೆ. ಇಲ್ಲಿಯ ನಿವಾಸಿಗಳಿಗೂ ಈ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

ಪ್ರತಿನಿತ್ಯವೂ ಈ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗುತ್ತಲೇ ಇದೆ. ಈಗ ಪತ್ರಿಕೆಗೆ ದೊರೆತಿರುವ ಮಾಹಿತಿ ಪ್ರಕಾರ ಬಸೆಟ್ಟಿ ಕೊಪ್ಪಲು ರಸ್ತೆಯನ್ನು 50 ಅಡಿಗೆ ವಿಸ್ತರಿಸಲಾಗುವುದು.

ಸಹ್ಯಾದ್ರಿ ವೃತ್ತದಿಂದ ಎಂ.ಜಿ.ರಸ್ತೆಯವರೆವಿಗೂ 50 ಅಡಿ ರಸ್ತೆಗೆ ಈಗಾಗಲೇ ಯೋಜನೆ ರೂಪಿತವಾಗಿದ್ದು, ಇದಕ್ಕಾಗಿ ಮಾರ್ಕಿಂಗ್ ಮತ್ತಿತರ ಕೆಲಸವೂ ಮುಗಿದಿದೆ.

ರಸ್ತೆಯ ಮಧ್ಯದಿಂದ ಎಡಭಾಗಕ್ಕೆ 25 ಅಡಿ ಮತ್ತು ಬಲಭಾಗಕ್ಕೆ 25 ಅಡಿ ವಿಸ್ತರಣೆಯಾಗಲಿದೆ. ಇದಕ್ಕಾಗಿ 3 ಕೋಟಿ ರೂ. ಹಣವನ್ನು ಕಾಯ್ದಿರಿಸಲಾಗಿದೆ. ಡಾಂಬರು, ಫುಟ್‌ಪಾತ್ ರಸ್ತೆ ಇತ್ಯಾದಿ ಕೂಡ ನಿರ್ಮಾಣವಾಗಲಿದೆ.

ಕಂದಾಯ ಇಲಾಖೆ ಈಗಾಗಲೇ ಯೋಜನೆ ರೂಪಿಸಿದ್ದು, ಸರ್ಕಾರಕ್ಕೂ ಪ್ರಸ್ತಾವನೆ ಹೋಗಿದೆ. ಈ ಭಾಗದಲ್ಲಿ ಬರುವ ಮನೆಗಳಿಗೆ ಪರಿಹಾರವನ್ನೂ ಕೊಡಲಾಗುವುದು. ಈಗಾಗಲೇ ಇಲ್ಲಿಯ ನಿವಾಸಿಗಳು ತಮ್ಮೊಂದಿಗೆ ಮಾತನಾಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಸ್ಪಷ್ಟಪಡಿಸಿದರು.

ಎ.ವಿ.ಕೆ. ಕಾಲೇಜು ರಸ್ತೆಯೂ ವಿಸ್ತರಣೆ

ಎವಿಕೆ ಕಾಲೇಜು ರಸ್ತೆ ವಿಸ್ತರಣೆಗೆ ಈಗ ಮುಹೂರ್ತ ಕೂಡಿ ಬಂದಿದೆ. ಆದರೆ ಜನರು ಮಾತ್ರ ಗೊಂದಲದಲ್ಲಿಯೇ ಇದ್ದಾರೆ. ಮಹಾವೀರ ಸರ್ಕಲ್‌ನಿಂದ ಹರ್ಷಮಹಲ್ ಹೋಟೆಲ್‌ವರೆಗೆ ಮಾತ್ರ ಈ ರಸ್ತೆ ವಿಸ್ತರಣೆಯಾಗಲಿದೆ. ಎವಿಕೆ ಕಾಲೇಜು ಬದಿಯ ಜಾಗವನ್ನು ಹಾಗೆಯೇ ಉಳಿಸಿಕೊಂಡು ಪಾರ್ಕ್ ಭಾಗದ ಜಾಗವನ್ನು ಬಳಸಿಕೊಂಡು ರಸ್ತೆ ನಿರ್ಮಿಸಲಾಗುವುದು. 10 ಅಡಿ ರಸ್ತೆ ವಿಸ್ತರಿಸಲಾಗುವುದು. ಅಲ್ಲಿಗೆ ಎವಿಕೆ ಕಾಲೇಜು ರಸ್ತೆ 50 ಅಡಿ ರಸ್ತೆಯಾಗುತ್ತದೆ.

'ನೀರು ಕೊಡಿ, ಜನರ ಬವಣೆ ನೀಗಿಸಿ'

ಹಾಸನ ನಗರಸಭೆಯನ್ನು ನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಈಗಾಗಲೇ ಸರ್ಕಾರ ಪರಿಶೀಲನೆ ನಡೆಸಿದೆ. ಅತೀ ಶೀಘ್ರ ನಗರಸಭೆ ನಗರಪಾಲಿಕೆಯಾಗಿ ಮೇಲ್ದರ್ಜೆಯಾಗಲಿದೆ.

ನಗರಪಾಲಿಕೆಯಾದರೆ ಮೂಲಭೂತ ಸೌಲಭ್ಯವೂ ದೊರಕಲಿದೆ. ನಗರಕ್ಕೆ ಹೊಂದಿಕೊಂಡಿರುವ ಹತ್ತಕ್ಕೂ ಹೆಚ್ಚು ಬಡಾವಣೆ ಮತ್ತು ಹಳ್ಳಿಗಳು ನಗರಪಾಲಿಕೆಗೆ ಸೇರ್ಪಡೆಗೊಳ್ಳಲಿವೆ.

ನಗರಪಾಲಿಕೆಯಾದರೆ ಹಾಸನ ಸುತ್ತಮುತ್ತ ಇರುವ ಬಡಾವಣೆಗಳಿಗೆ ಸಮರ್ಪಕ ನೀರು ಪೂರೈಕೆಯಾಗಲಿದೆ. ಈಗಾಗಲೇ ಹೇಮಾವತಿ ಜಲಾಶಯದಿಂದ ಹಾಸನ ನಗರಕ್ಕೆ ಕುಡಿಯುವ ನೀರು ಪೂರೈಕೆ ಸಂಬಂಧ ಅಮೃತ ಯೋಜನೆಯಡಿ ಕೆಲಸ ಪ್ರಗತಿಯಲ್ಲಿದೆ. ಮುಂದಿನ ಮಾರ್ಚ್ ವೇಳೆಗೆ ಪೈಪ್ ಜೋಡಣಾ ಕೆಲಸ ಕೂಡ ಮುಕ್ತಾಯಗೊಂಡು ನೀರು ಪೂರೈಕೆ ಆಗಲಿದೆ.

ಹಾಸನ : ನಗರಕ್ಕೆ ಹೊಂದಿಕೊಂಡಿರುವ ವಿದ್ಯಾನಗರ ಬಡಾವಣೆಯಲ್ಲಂತೂ ನೀರಿಗಾಗಿ ಜನ ಪರದಾಡುತ್ತಿದ್ದಾರೆ. ಇಲ್ಲಿ ಅಂತರ್ಜಲ ಬತ್ತಿರುವುದರಿಂದ ಬೋರ್‌ವೆಲ್ ಹಾಗೂ ಬಾವಿಗಳು ಸಂಪೂರ್ಣ ಬತ್ತಿಹೋಗಿವೆ.

ಸತ್ಯವಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಹುತೇಕ ಬಡಾವಣೆಗಳಲ್ಲಿ ಇದೇ ಪರಿಸ್ಥಿತಿ ಇದೆ. ಅಮೃತ ಯೋಜನೆ ಅನುಷ್ಠಾನಗೊಂಡರೆ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವಂತೂ ಸಿಗುತ್ತದೆ. 'ಜನತಾಮಾಧ್ಯಮ' ಪತ್ರಿಕೆ ಬುಧವಾರ ಈ ಕುರಿತು ಸವಿಸ್ತಾರವಾದ ವರದಿ ಮಾಡಿತು. ಇದಕ್ಕೆ ಜನರಿಂದಲೂ ಅಭೂತಪೂರ್ವ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ.

"ವಿದ್ಯಾನಗರ ಬಡಾವಣೆಯಲ್ಲಂತೂ ನೀರಿಗಾಗಿ ವಿಪರೀತ ಸಮಸ್ಯೆ ಎದುರಾಗಿದೆ. ಅಂತರ್ಜಲ ಇಲ್ಲಿ ಬರಿದಾಗಿದೆ. ಕಳೆದ ನಾಲ್ಕೈದು ವರ್ಷದಿಂದ ನೀರಿನ ಸಮಸ್ಯೆ ಬಿಗಡಾಯಿಸಿದೆ. ಈ ವರ್ಷವಂತೂ ಹೇಳತೀರದ ಸಮಸ್ಯೆಯಾಗಿತ್ತು. ಅಮೃತ ಯೋಜನೆ ಅನುಷ್ಠಾನದ ನಂತರ ತಕ್ಷಣವೇ ನೀರು ಪೂರೈಸಬೇಕು.

-ಡಾ॥ಗುರುರಾಜ ಹೆಬ್ಬಾರ್, ವಿದ್ಯಾನಗರ.

"ನಗರಪಾಲಿಕೆಯಾದರೆ ಒಳ್ಳೆಯದು. ವಿದ್ಯಾನಗರ ನಿವಾಸಿಗಳನ್ನೇಕೆ ಮೂಲಸೌಲಭ್ಯಗಳಿಂದ ವಂಚಿಸಲಾಗುತ್ತಿದೆ? ನಗರಕ್ಕೆ ಹೊಂದಿಕೊಂಡಂತಿದ್ದರೂ ನೀರು ಪೂರೈಕೆ ಇಲ್ಲ. ಸತ್ಯವಂಗಲ ಗ್ರಾಮ ಪಂಚಾಯಿತಿ ನಗರಪಾಲಿಕೆಗೆ ಸೇರ್ಪಡೆಯಾಗುತ್ತದೆ. ನಮಗೆ ಕಾಲಮಿತಿಯೊಳಗೆ ಯೋಜನೆ ಪೂರ್ಣಗೊಳಿಸಿ ನೀರು ಕೊಡಲಿ.

-ಡಾ॥ಭಾರತಿ ರಾಜಶೇಖರ್, ವಿದ್ಯಾನಗರ

"ಬುಧವಾರದ ಸಂಚಿಕೆಯಲ್ಲಿ ಈ ಬಗ್ಗೆ ಎಲ್ಲಾ ವಿವರ ಓದಿದೆ. ಬಡಾವಣೆಯಲ್ಲಿ ನೀರಿಗಂತೂ ಹೇಳತೀರದ ಸಮಸ್ಯೆ. ಬೋರ್‌ವೆಲ್‌ಗಳು ಬತ್ತಿವೆ. ಸರ್ಕಾರ ಯಾವುದಾದರೂ ಯೋಜನೆಯನ್ನು ಮಾಡಲಿ, ಮೊದಲು ನೀರು ಕೊಡಿ. ಜನರ ಬಹು ದಿನದ ಬೇಡಿಕೆಯನ್ನು ಪೂರೈಸಿ.

-ಡಾ॥ದೇವದಾಸ್, ವಿದ್ಯಾನಗರ.

"ವರದಿ ಸಮಯೋಚಿತವಾಗಿದೆ. ವಿದ್ಯಾನಗರ, ಹರಳಹಳ್ಳಿ, ಜಯನಗರ, ಚಿಕ್ಕಕೊಂಡಗುಳ, ತೇಜೂರು ಇಲ್ಲಿ ನೀರಿಗಾಗಿ ಪರದಾಡುತ್ತಿದ್ದಾರೆ. ಹಂದಿನಕೆರೆಯಿಂದ ಈ ಭಾಗದಲ್ಲಿನ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವುದು ಸೂಕ್ತ.

-ಮಂಜುನಾಥ ಮೋರೆ, ಸಾಮಾಜಿಕ ಕಾರ್ಯಕರ್ತ

ಕೊತ ಕೊತ ಕುದಿಯುತ್ತಿರುವ ನಿವಾಸಿಗಳು

ಗೊರೂರಿನಲ್ಲಿ ಹೇಮಾವತಿ ಜಲಾಶಯವಿದೆ. ಆದರೆ ಇಲ್ಲಿಯ ನಿವಾಸಿಗಳಿಗೆ ಕುಡಿಯುವ ನೀರು ಸಿಗುತ್ತಿಲ್ಲ. ನಗರದ ಸುತ್ತಮುತ್ತ ಇರುವ ಬಡಾವಣೆಗಳ ಜನ ಈಗ ತೀವ್ರ ಅಸಮಾಧಾನಗೊಂಡಿದ್ದಾರೆ.

ಅಮೃತ ಯೋಜನೆ ಅನುಷ್ಠಾನಗೊಂಡರೂ ನಗರ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಬಡಾವಣೆಗಳಿಗೆ ನೀರು ಪೂರೈಕೆಯದ್ದೇ ಸಮಸ್ಯೆಯಾಗಲಿದೆ. ನೀರು ಪೂರೈಕೆಗೆ ಸಂಬಂಧಿಸಿದಂತೆ ಹೆಚ್ಚುವರಿ ಪೈಪ್‌ಗಳನ್ನು ಅಳವಡಿಸಬೇಕು. ಈ ಯೋಜನೆಯ ಕೆಲಸ ಪ್ರಗತಿಯಲ್ಲಿದೆ. ಹೆಚ್ಚುವರಿ ಪೈಪ್ ಅಳವಡಿಕೆಗೂ ಈಗಿನಿಂದಲೇ ಯೋಜನೆ ರೂಪಿಸಿ ಕಾಲಮಿತಿಯಲ್ಲಿ ಕೆಲಸ ಮಾಡುವಂತೆಯೂ ಒತ್ತಾಯಿಸಿದ್ದಾರೆ.

ನೈಸರ್ಗಿಕ ಸಂಪತ್ತು ಲೂಟಿ : ವಿಷಾದ

ಸಕಲೇಶಪುರ : ಹಲವು ಪ್ರಗತಿಪರ ಕಾಮಗಾರಿಗಳ ಹೆಸರಿನಲ್ಲಿ ತಾಲ್ಲೂಕಿನ ಇಡೀ ಪಶ್ಚಿಮ ಘಟ್ಟದ ಮೇಲೆ ನಿರಂತರ ದಾಳಿ ನಡೆಯುತ್ತಿದೆ. ಇಲ್ಲಿನ ನೈಸರ್ಗಿಕ ಸಂಪತ್ತನ್ನು ಎಗ್ಗಿಲ್ಲದೆ ಲೂಟಿ ಮಾಡಲಾಗುತ್ತಿದೆ. ಪಶ್ಚಿಮ ಘಟ್ಟ ಪರಿಸರದ ಲೂಟಿಕೋರರಿಗೆ ಒಂದು ರೀತಿ ಬೀಗವಿಲ್ಲದ ಖಜಾನೆಯಂತಾಗಿದೆ ಎಂದು ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಮ್ಮಿಗೆ ಮೋಹನ್ ವಿಷಾದಿಸಿದರು.

ಜಿಲ್ಲಾ ಕಾಫಿ ಬೆಳೆಗಾರರ ಸಂಘದ ವಾರ್ಷಿಕ ಮಹಾಸಭೆ ಮತ್ತು ಕಾಫಿ ಮೇಳ ಪ್ರಯುಕ್ತ ನಡೆಯುತ್ತಿರುವ ಎರಡು ದಿನಗಳ ಕಾರ್ಯಕ್ರಮದಲ್ಲಿ ಬುಧವಾರ ಬೆಳೆಗಾರರ ಪರಿಸರ ವೇದಿಕೆ ಉದ್ಘಾಟಿಸಿ ಹಾಗೂ ನೂತನ ಲಾಂಛನ ಅನಾವರಣಗೊಳಿಸಿ ಅವರು ಮಾತನಾಡಿದರು.

ಪಶ್ಚಿಮ ಘಟ್ಟದ ಉಳಿವು ಎಂದರೆ ಅದು ಈ ಭಾಗದ ಬೆಳೆಗಾರರ, ಸಾಮಾನ್ಯ ರೈತರ ಬದುಕಾಗಿದೆ. ಆದುದರಿಂದ ಈ ಭಾಗದ ಪರಿಸರ ಸಂರಕ್ಷಣೆಯಲ್ಲಿ ಹೆಚ್ಚಿನ ಸಹಕಾರ ನೀಡುತ್ತಿರುವ ಕಾಫಿ ಬೆಳೆಗಾರರು ಸ್ವತಃ ತಾವೇ ಒಂದು ಪರಿಸರ ಸಮಿತಿ ರಚಿಸಿ ಪಶ್ಚಿಮ ಘಟ್ಟ ಪ್ರದೇಶದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸಬೇಕು. ಇದರ ಆಗು ಹೋಗುಗಳ ಬಗ್ಗೆ ಸಾರ್ವಜನಿಕರಿಗೆ ಪಾರದರ್ಶಕ ಮಾಹಿತಿ ನೀಡಿದರೆ ಪರಿಸರಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸಲು ಸಾಧ್ಯವಾಗುತ್ತದೆ ಎಂದರು.

ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಜಯರಾಂ ಮಾತನಾಡಿ, ಕಳೆದ ನಲವತ್ತು ವರ್ಷಗಳಿಂದ ಕಾಫಿ ಬೆಳೆಗಾರರು ತಮ್ಮ ಹಕ್ಕುಗಳಿಗಾಗಿ ಹಲವಾರು ಸಂಘಟನೆಗಳ ಮೂಲಕ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಕಾಫಿ ಬೆಳೆಗಾರರೇ ಕಾಫಿ ಮಂಡಳಿ ಅಧ್ಯಕ್ಷರಾಗಬೇಕೆಂಬ ಹಲವಾರು ವರ್ಷಗಳ ಬೆಳೆಗಾರರ ಕೂಗಿಗೆ ಕೇಂದ್ರದ ಎನ್.ಡಿ.ಎ. ಸರ್ಕಾರ ಮನ್ನಣೆ ನೀಡಿ ಕಾಫಿ ಬೆಳೆಗಾರ ರೊಬ್ಬರನ್ನು ಕಾಫಿ ಮಂಡಳಿ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ನಮ್ಮ ಹೋರಾಟಕ್ಕೆ ಸಂದ ಜಯ ಎಂದರು. (-4ನೇ ಪುಟಕ್ಕೆ)

'ಸ್ವಯಂಪ್ರೇರಿತ ರಕ್ತದಾನ ಮಾಡಿ'

ಹಾಸನ : ಅಪಘಾತ ಸಂದರ್ಭದಲ್ಲಿ ಹೆಚ್ಚು ರಕ್ತಸ್ರಾವ ಸಂಭವಿಸಿ ಸಾವನ್ನಪ್ಪುವುದನ್ನು ತಡೆಯಲು ಹಾಗೂ ತುರ್ತು ಶಸ್ತ್ರ ಚಿಕಿತ್ಸೆ ಸಂದರ್ಭದಲ್ಲಿ ಅಗತ್ಯವಿರುವ ರಕ್ತವನ್ನು ರೋಗಿಗೆ ನೀಡಿ ಜೀವ ಉಳಿಸಲು ನೆರವಾಗಲು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವುದರ ಮೂಲಕ ಸಹಕರಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ವೆಂಕಟೇಶ್ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಾಸನ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ, ಶ್ರೀ ಚಾಮರಾಜೇಂದ್ರ ಜಿಲ್ಲಾಸ್ಪತ್ರೆ, ಭಾರತೀಯ ರೆಡ್‌ಕ್ರಾಸ್ ಘಟಕ, ರೆಡ್ ರಿಬ್ಬನ್ ಕ್ಲಬ್ ಮತ್ತು ರಕ್ತನಿಧಿ ಕೇಂದ್ರ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ರೆಡ್‌ಕ್ರಾಸ್ ಘಟಕ, ಹಿಮ್ಸ್ ಇವರ ಸಂಯುಕ್ತಾಶ್ರಯದಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ವಿಶ್